Sri D. B. KALMANKAR.—Sir, in view of the fact that these allegations are made by the hon. Members of this House, is it not sufficient that Government should take note of it and issue a circular as requested by my friend ? The circular as such does not do any harm to anydody. On the other hand, it will have a useful and salutary effect on the expeditious execution of the works and avoid such corrupt practices which are there in every district and in every taluk.

Sri D. PARAMESWARAPPA.—For the information of my friend, I would say we have constituted advisory committees at the district level and taluk level wherein the MLA and MLC of the place and MP are put in. If they are interested in any such cases, certainly, they are at liberty to take it up there.

Sri G. CHANDRAKANTH.—Sir, such things we are hearing for the first time. So far, we have not even received a notice of such meeting.

ಶ್ರೀ ಬಿ. ಪಿ. ಗಂಗಾಧರ್.—ನಮಗೆ ಒಂದು ನೋಟೀಸ್ ಕೂಡ ಬಂದಿಲ್ಲ. ನಮ್ಮನ್ನು ಒಂದು ದಿವಸವೂ ಕೂಡ ಮೀಟಿಂಗಿಗೆ ಕರೆದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಕಮಿಟಿ ಮೀಟಿಂಗುಗಳನ್ನು ಕರೆದರೂ ಕೂಡ ಒಂದು ಸಾರಿಯೂ ನನ್ನನ್ನು ಆ ಮೀಟಿಂಗಿಗೆ ಕರೆದಿಲ್ಲ. ಅಂದಮೇಲೆ ಪತಕ್ಕೋಸ್ಕರ ಅಂತಹ ಕಮಿಟಿ ಇರಬೇಕು ?

Mysore Excise (Second Amendment) Bill, 1970

(i) Statutory Resolution to disapprove Ordinance No. 4 of 19..

(ii) Motion to Consider the Bill.

Mr. DEPUTY SPEAKER.—Sir M. Nagappa may move his statutory resolution.

Sri M. NAGAPPA (Raichur).—Sri, I beg leave of the House to move this statutory resolution :

> "That this Assembly disapproves the Ordinance No. 4 of 1970, the Mysore Excise (Second Amendment) Ordinance 1970, issued by the Governor of Mysore on 7th August 1970."

Mr. DEPUTY SPEAKER.—Motion moved :

> "That this Assembly disapproves the Ordinance No. 4 of 1970, the Mysore Excise (Second Amendment) Ordinance, 1970 issued by the Governor on 7th August 1970."

The Hon. Minister for Excise to move the Bill.

Sri RAMAKRISHNA HEGDE (Minister for Finance, Planning and Youth Welfare).—Sir, I beg to move :

> "That the Mysore Excise (Second Amendment) Bill, 1970, be taken into consideration."

Mr. DEPUTY SPEAKER.—Motion moved :

" That the Mysore Excise (Second Amendment) Bill, 1970, be taken into consideration."

† ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಈ ಬಿಲ್ಲಿನಲ್ಲಿ ಇರತಕ್ಕಂಥ ವಿಚಾರದ ಬಗ್ಗೆ ನಾನು ಎರಡು ಮಾತುಗಳನ್ನು ಹೇಳಬಯಸುತ್ತೇನೆ. ಇದರಲ್ಲಿರುವುದು ಎರಡು ಮಹತ್ವ ವಾದಂಥ ವಿಚಾರಗಳು. ಮೊದಲನೆಯದು, ಕಳೆದ ಕೆಲವು ವರ್ಷಗಳಿಂದ ಸರ್ಕಾರ ಬೇರೆಬೇರೆ ತರಹದಲ್ಲಿ ಪಾನದ ವಾರಾಟದ ಮೇಲೆ ಲೀಟರ್‌ಫೀ ಎಂಬ ಕರವನ್ನು ಎತ್ತುತ್ತಾ ಇದ್ದು ಈ ಬಗ್ಗೆ ಕೆಲವು ವರ್ಷಗಳಿಂದ ಅನೇಕ ಜನರು ಲೀಟರ್‌ಫೀ ಹೇರತಕ್ಕ ಕಾನೂನನ್ನು ವಿರೋಧಿಸಿ ಹೈಕೋರ್ಟಿಗೆ ಹೋಗಿದ್ದಾರೆ. ಈ ಆಕ್ಟ್‌ನಲ್ಲಿ ಲೀಟರ್‌ಫೀ ಬಗ್ಗೆ ಸ್ಪೆಸಿಫಿಕ್ಕಾಗಿ ಯಾವ ಪ್ರಾವಿಷನ್ ಸಹ ಇಲ್ಲ, ಎಕ್ಸೈಜುಡ್ಯೂಟಿ ಎಂದು ಇದೆ. ಹೊರಗಿನಿಂದ ಬರತಕ್ಕ ಲಿಕ್ಕರ್‌ಗೆ ಕೌಂಟರ್ ಫೀ ಡ್ಯೂಟಿ ಹಾಕುವುದು ಪ್ರಾವಿಷನ್ನಿನಲ್ಲಿದೆ. ಆದರಿಂದ ಆ ಆಕ್ಟಿಗೆ ಒಂದು ಅಮೆಂಡ್‌ಮೆಂಟ್ ಮಾಡಬೇಕೆಂದು ನನ್ನ ಉದ್ದೇಶ. ಅದಕ್ಕೆ ಈ ಲೀಟರ್ ಫೀ ಎತ್ತುವ ಬಗ್ಗೆ ಅವಕಾಶ ಮಾಡಿದ್ದೇವೆ. ಅದನ್ನು ಮಾಡದೆ ಹೋದರೆ, ಕಳೆದ ಮೂರು ನಾಲ್ಕು ವರ್ಷಗಳಿಂದ ನಾವು ಏನು ಲೀಟರ್ ಫೀ ಎಂದು ಹಾಕುತ್ತಿದ್ದೇವೆ ಅದನ್ನು ವಾಪಸ್ಸು ಕೊಡಬೇಕಾಗಬಹುದು.

5-00 P.M.

ಶ್ರೀ ಟಿ. ಆರ್. ಶಾಮಣ್ಣ.—ಲೀಟರ್ ಫೀ ಎಂಬುವುದರ ಬಗ್ಗೆ ವಿವರಣೆ ಸ್ವಲ್ಪ ಕೊಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಲೀಟರ್ ಫೀ ಅಂದರೆ, ಲಿಕರ್ ಏನು ವಾರಾಟವಾಗುತ್ತದೆ ಅದರ ಮೇಲೆ ಮೂರು ತರದ ಕರ ಹಾಕುತ್ತಿದ್ದೇವೆ. ಇಂಡಿಯನ್ ಲಿಕರ್ಸ್ ಮೇಲೆ ಇಂತಿಷ್ಟು, ಬೇರೆ ತರದ ಲಿಕರ್ಸ್ ಮೇಲೆ ಇಂತಿಷ್ಟು ಎಂದು ಹಾಕುತ್ತಿದ್ದೇವೆ, ಎರಡನೆಯದು ವಾರಾಟ ತೆರಿಗೆ, ಮೂರನೆಯದು ಹೊರಗಡೆಯಿಂದ ಇಂಪೋರ್ಟ್ ಮಾಡಿದಂತಹ ಯಾವ ಲಿಕರ್ಸ್ ಇವೆ, ಅವಕ್ಕೆ ಕೌಂಟರ್ ವೈಲಿಂಗ್ ಡ್ಯೂಟಿ ಎಂದು ಹಾಕುತ್ತೇವೆ. ಇದರ ಜೊತೆಗೆ ಲೀಟರ್ ಫೀ ಎಂಬ ಕರವನ್ನು ಕೂಡ ಎತ್ತುತ್ತಿದ್ದೇವೆ. ಬೇರೆ ಬೇರೆ ತರದ ಲಿಕರ್ಸ್‌ಗೆ ನಾವು ಲೀಟರ್ ಫೀಯನ್ನು ಎತ್ತುತ್ತಿದ್ದೇವೆ. ಈ ಅಮೆಂಡ್‌ಮೆಂಟನ್ನು ನಾವು ತರವಿದ್ದರೆ, ಬಹುಶಃ ನಮ್ಮ ವಿರುದ್ಧ ಎಲ್ಲಿಯಾದರೂ ತೀರ್ಮಾನವಾದರೆ, ಕಳೆದ ಮೂರು ನಾಲ್ಕು ವರ್ಷಗಳಿಂದ ಪ್ರತಿ ವರ್ಷ 20–30 ಲಕ್ಷ ರೂಪಾಯಿಂತೆ ಏನು ತೆರಿಗೆಯನ್ನು ತೆಗೆದುಕೊಂಡಿದೆವೆ, ಅದನ್ನು ವಾಪಸ್ಸು ಕೊಡತಕ್ಕ ಪ್ರಸಂಗ ಬರಬಹುದು, ಆ ಉದ್ದೇಶದಿಂದ ಇದನ್ನು ತಂದಿದ್ದೇವೆ.

ಎರಡನೆಯ ಉದ್ದೇಶವೇನೆಂದರೆ, ಈಗಿನ ಆಕ್ಟಿನಲ್ಲಿ ಕೆಲವು ಸಣ್ಣ ಪುಟ್ಟ ಬದಲಾವಣೆಗಳನ್ನು ಮಾಡಬೇಕೆಂದು ಇದನ್ನು ತಂದಿದ್ದೇವೆ. ಉದಾಹರಣೆಗೆ ಡೆಫಿನಿಷನ್‌ನಲ್ಲಿ ಈಗಿನ ಆಕ್ಟಿನಲ್ಲಿ ಟಾಡಿ ಟ್ರೀ ಎಂದು ಇದೆ, ಅದು ಅಷ್ಟು ವ್ಯಾಪಕವಾಗಿಲ್ಲವೆಂದು ಅದನ್ನು ' ಎಕ್ಸೈಜ್ ಟ್ರೀ ' ಎಂದು ಮಾಡಿದ್ದೇವೆ, ಮತ್ತು ನಮ್ಮ ಪೀರ್ಸಾವಟ್ಟದ ಅಧಿಕಾರಿಗಳನ್ನು ಎಕ್ಸೈಜ್ ಆಫೀಸರ್ಸ್, ಮತ್ತು ಡೆಪ್ಯೂಟಿ ಎಕ್ಸೈಸ್ ಆಫೀಸರ್ಸ್ ಎಂದು ಕರೆಯುತ್ತಾರೆ, ಆದರ ಬದಲು ಸುಪರಿಂಟೆಂಡೆಂಟ್ ಆಫ್ ಎಕ್ಸೈಜ್ ಮತ್ತು ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಎಕ್ಸೈಜ್ ಎಂದು ಹೆಸರು ಕೊಡಬೇಕೆಂದು ಮಾಡಿದ್ದೇವೆ. ಮತ್ತೊಂದು ಏನೆಂದರೆ, ನಾವು ಈಗಾಗಲೇ ಎಕ್ಸೈಜ್ ಇಂಟೆಲಿಜೆನ್ಸ್ ಬ್ಯುರೋ ಸ್ಥಾಪನೆ ಮಾಡಿದೆವೆ. ಅದರಲ್ಲಿ ಕೆಲವೊಂದು ಸಿಬ್ಬಂದಿ ಇವೆ. ಇದನ್ನು ಎಗ್ಸಾಕ್ಯೂಟಿವ್ ಆರ್ಡರ್ ಪ್ರಕಾರ ಮಾಡಿದ್ದೇವೆ. ಇದಕ್ಕೆ ಒಂದು ಸ್ಯಾಚುಟರಿ ರೂಪ ಕೊಟ್ಟರೆ ಅದಕ್ಕೆ ಹೆಚ್ಚಿನ ಮಹತ್ವ ಬರಬಹುದು ಎನ್ನತಕ್ಕ ಸೂಚನೆ ಬಂದಿರುವುದರಿಂದ, ಈ ಆಕ್ಟಿನಲ್ಲಿ ಎಕ್ಸೈಸ್ ಇಂಟೆಲಿಜೆನ್ಸ್ ಬ್ಯುರೋ ಇರಬೇಕು ಮತ್ತು ಅದರಲ್ಲಿ ಇಂತಿಂತಹ ಆಫೀಸರ್ಸ್ ಇರಬೇಕೆಂದು ಹೇಳಿದ್ದೇವೆ.

ಕೊನೆಯದಾಗಿ ಅಪರಾಧ ಮಾಡಿದರೆ, ಈಗಿರತಕ್ಕ ಪ್ರೊವಿಜನ್ ಪ್ರಕಾರ ಇಂತಿಷ್ಟೇ ದಂಡ, ಶಿಕ್ಷೆ ಮಾಡಬೇಕೆಂದು ಇದೆ. ಎರಡನೇ ಸಲ ಅಪರಾಧ ಮಾಡಿದರೆ, ಹೆಚ್ಚು ಶಿಕ್ಷೆ ಮಾಡಬೇಕೆಂದು ಇದೆ. ಇದರಲ್ಲಿ ಯಾರು ಮೊದಲನೆಯ ಸಲ ತಪ್ಪು ಮಾಡುತ್ತಾರೆ, ಅಂಥವರಿಗೆ ಮ್ಯಾಜಿಸ್ಟ್ರೇಟರು ಮುಂದೆ ಅವರ ಒಳ್ಳೆಯ ನಡತೆಯ ಬಗ್ಗೆ ಒಂದು ಬಾಂಡ್ ಬರೆಸಿಕೊಳ್ಳುವ ಒಂದು ಅವಕಾಶವನ್ನು

(ಶ್ರೀ ರಾಮಕೃಷ್ಣ ಹೆಗೆಡೆ)

ಮಾಡಬೇಕೆಂದು ಇದರಲ್ಲಿ ತಂದಿದ್ದೇವೆ. ಆದ್ದರಿಂದ ಇದರಲ್ಲಿ ಯಾವ ವಿಧವಾದ ವಿವಾದವನ್ನು ತರುವಂತಹ ವಿಷಯ ಕಾಣುವುದಿಲ್ಲ. ಆದ್ದರಿಂದ ಇದಕ್ಕೆ ಸಭೆ ಅನುಮತಿ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

†ಶ್ರೀ ಎಂ. ನಾಗಪ್ಪ.—ನಾನು ರಾಜ್ಯಪಾಲರು ಹೊರಡಿಸಿದಂತಹ ತುರ್ತು ಆಜ್ಞೆಯನ್ನು ತಿರಸ್ಕರಿಸಬೇಕೆಂಬ ಸೂಚನೆಯನ್ನು ಈ ಸಭೆಯ ಮುಂದೆ ತಂದಿದ್ದೇನೆ. ನನ್ನ ಅಭಿಪ್ರಾಯದಲ್ಲಿ ರಾಜ್ಯಾಂಗದ ಅಥವಾ ಶಾಸನಾಂಗದ ಕೆಲವು ಕಲಮುಗಳ ಪ್ರಕಾರ ಇದು ನ್ಯಾಯವಲ್ಲವೆಂದು ಹೇಳುತ್ತೇನೆ. ಪೊಥಲನೆಯದಾಗಿ ನಾವು ತುರ್ತು ಆಜ್ಞೆಯ 7ನೇ ಕ್ಲಾಸ್ ನೋಡಿದರೆ ಗೊತ್ತಾಗುತ್ತದೆ. ರೂಲ್ 15, ಸೆಕ್ಷನ್ (ಎ) ಏನು ಎಂಬುದನ್ನು ನೋಡಬೇಕಾದುದು ಅವಶ್ಯಕ. ಅದು ಈ ರೀತಿ ಹೇಳುತ್ತದೆ:

"Except as otherwise provided in sub-section (2), no person shall export, import, transport, sell or have in his possession any quantity of molasses:

Provided that no manufacturer of jaggery from sugarcane shall be liable for possession of molasses which is the byproduct of the process;

(2) The Excise Commissioner may subject to such rules as may be prescribed in this behalf grant.—

(*a*) licence for the export, import, sale or possession of molasses, or

(*b*) permits for the transport of molasses."

ಈ ಒಂದು 15ನೇ ಸೆಕ್ಷನ್ (ಎ)ಯನ್ನು ಪಿನ್ನಿಪರ್ ಆಕ್ಟಿಗೆ ಸೇರಿಸಬೇಕೆನ್ನುವ ನೆಪದಿಂದ ಇದನ್ನು ತಂದಿದ್ದೀರಿ. ಇದರಲ್ಲಿ ಪರವಾನೆ ಇಲ್ಲದೆ, ಅವುಗಳನ್ನು ತರುವುದಕ್ಕಾಗಲಿ, ಹೊರಗಡೆ ಕಳಿಸುವುದಕ್ಕಾಗಲಿ, ಅಥವ ನಿರ್ದಿಷ್ಟವಾಗಿ ತಮ್ಮಲ್ಲಿ ಇಟ್ಟುಕೊಳ್ಳುವುದಕ್ಕಾಗಲಿ ಸಾಧ್ಯವಿಲ್ಲ. ಇದು ರಾಜ್ಯಾಂಗಕ್ಕೆ ವಿರುದ್ಧವಲ್ಲವೇ ಹೇಗೆ? ಇದನ್ನು ನಾವು ಪರಿಶೀಲಿಸಬೇಕಾದರೆ, ವ್ಯಾಪಾರ ಮಾಡತಕ್ಕ ಮನುಷ್ಯನಿಗೆ ಸಂಬಂಧಪಟ್ಟ ಯಾವುದೇ ಒಂದು ಕಾಯಿದೆಯನ್ನು ನೀವು ರಾಜ್ಯದಲ್ಲಿ ತುರ್ತು ಆಜ್ಞೆಯ ಮೂಲಕ ಹೊರಡಿಸುವುದಕ್ಕಾಗಲಿ, ಅಥವಾ ವಿಧಾನಸಭೆಯ ಮುಂದೆ ತರತಕ್ಕ ಪರಿಸ್ಥಿತಿಯಲ್ಲಾಗಲಿ, ಕೆಲವು ರಾಜ್ಯಾಂಗ ಕಟ್ಟಳೆಗಳನ್ನು ಅನುಸರಿಸಬೇಕಾಗಿದೆ. ಆರ್ಟಿಕಲ್ 304 (ಬಿ) ಯನ್ನು ಮಾನ್ಯನದನ್ಯರು ಗಮನಿಸಬೇಕು. ಅದು ಈ ರೀತಿ ಇದೆ:

"304—Restrictions on trade, commerce and intercourse among States:

Notwithstanding anything in article 301 or article 303, the Legislature of a State may by law—

(*a*) impose on goods imported from other States (or the Union territories) any tax to which similar goods manufactured or produced in that State are subject, so however, as not to discriminate between goods so imported and goods so manufactured or produced; and

(*b*) impose such reasonable restrictions on the freedom of trade, commerce or intercourse with or within that State as may be required in the public interest:

Provided that no Bill or amendment for the purposes of clause (b) shall be introduced or moved in the Legislature of a State without the previous sanction of the President."

ಇಲ್ಲ 15ನೇ ಸೆಕ್ಷನನ್ನು ನ್ಪಷ್ಟವಾಗಿ ಓದಿದರೆ, ಎಕ್ಸ್‌ಪೋರ್ಟ್ ಮಾಡಬೇಕಾದರೆ, ಇಂಪೋರ್ಟ್ ಮಾಡಬೇಕಾದರೆ, ಟ್ರಾನ್ಸ್‌ಪೋರ್ಟ್ ಮಾಡಬೇಕಾದರೆ ಅಥವಾ ಒಂದು ನಿರ್ದಿಷ್ಟ ವಾದ ಕ್ಯಾಂಟಿಟಿ ಇಟ್ಟುಕೊಳ್ಳಬೇಕಾದರೆ, ಲೈಸೆನ್ಸ್ ಬೇಕಾಗುತ್ತದೆ. ಇದಕ್ಕೆ ಅಧಿ ನಿಯಮಗಳು ಸಾರ್ಕಾರದಿಂದ ಹೊರಡಿಸಲ್ಪಡುತ್ತವೆ, ಅದಕ್ಕನುಗುಣವಾಗಿ ಇರಬೇಕೆಂದು ಈ ಕಾಯಿದೆಯಲ್ಲ ಹೇಳಲಾಗಿದೆ. ಇಂತಹ ಒಂದು ವ್ಯವಹಾರದಲ್ಲ ಅಫೀಸರಿಗೆ ಇದು ಒಂದು ಕಟ್ಟಳೆ. ಅಂತಹ ಕಾಯಿದೆಯನ್ನು ತರಬೇಕಾದರೆ, ರಾಷ್ಟ್ರಾಧ್ಯಕ್ಷರ ಅಪ್ಪಣೆಯಿಲ್ಲದೆ ತರುವುದಕ್ಕೆ ಸಾಧ್ಯವಿಲ್ಲ.

[CHAIRMAN (SMT. NAGARATHNAMMA HIREMATH) in the Chair]

ಏಕೆಂದರೆ ನಮ್ಮ ರಾಜ್ಯಾಂಗದಲ್ಲ ವ್ಯಾಪಾರಮಾಡುವವರಿಗೆ ಮತ್ತು ವ್ಯವಹಾರ ಮಾಡು ವವರಿಗೆ ಸರ್ವಾಧಿಕಾರ ಕೊಡಲಾಗಿದೆ. ಯಾರು ಬೇಕಾದರೂ ಕೂಡ ವ್ಯಾಪಾರ ಮಾಡಬಹುದು ಮತ್ತು ವ್ಯವಹಾರ ಮಾಡಬಹುದು. ಅದಕ್ಕೆ ಬೇಕಾದರೆ ರೀಸನಬಲ್ ರಿಸ್ಟ್ರಿಕ್ಷನನ್ನು ಸರ್ಕಾರ ದವರು ಹಾಕಬಹುದು. ಅಂತಹ ಒಂದು ರಿಸ್ಟ್ರಿಕ್ಷನನ್ನು ಹಾಕಬೇಕಾದರೆ ಮತ್ತು ಆ ಬಗ್ಗೆ ಕಾಯಿದೆ ಮಾಡಲು ರಾಜ್ಯ ವಿಧಾನಸಭೆಗೆ ತರುವ ಮುನ್ನ ಅದಕ್ಕೆ ರಾಷ್ಟ್ರಪತಿಯವರ ಅಪ್ಪಣೆ ಅತ್ಯ ವಶ್ಯಕ. ಈಗ ತಂದಿರತಕ್ಕಂತ ತುರ್ತುಆಜ್ಞೆಗೆ ಅವರ ಅಪ್ಪಣೆ ಅವಶ್ಯಕವೋ ಅಥವಾ ಅವಶ್ಯಕ ವಿರಲಿಲ್ಲವೋ ಎಂಬುದನ್ನು ನಾವು ಇಲ್ಲ ಗಮನಿಸಬೇಕಾಗಿದೆ. ಈ ಬಗ್ಗೆ ನಾವು ಆರ್ಟಿಕಲ್ 213ನ್ನು ಗಮನಿಸಬೇಕಾಗುತ್ತದೆ. ಅದರಲ್ಲ ಈ ರೀತಿ ಹೇಳಿದೆ :

"(1) If at any time, except when the Legislative Assembly of a State is in session, or where there is a Legislative Council in a State, except when both Houses of the Legislature are in session, the Governor is satisfied that circumstances exist which render it necessary for him to take immediate action, he may promulgate such Ordinances as the circumstances appear to him to require:

Provided that the Governor shall not, without instruction from the President, promulgate any such Ordinance if—

(a) A Bill containing the same provisions would under the Constitution have required the previous sanction of the President for the introduction thereof into the Legislature;"

ಇದು ಬಹಳ ಮುಖ್ಯವಾದುದು. ಆರ್ಟಿಕಲ್ 304 (ಬ) ಪ್ರಕಾರ ರಾಷ್ಟ್ರಪತಿಯವರ ಅಪ್ಪಣೆ ಇಲ್ಲದೆ ಇಂತಹ ಮಸೂದೆಯನ್ನು ನಥೆಯ ಮುಂದೆ ತರುವುದಕ್ಕೆ ಸಾಧ್ಯವಿಲ್ಲ; ಮತ್ತು ಇಂತಹ ವಿಷಯದಲ್ಲ ರಾಜ್ಯಪಾಲರು ಕೂಡ ತುರ್ತು ಆಜ್ಞೆ ಹೊರಡಿಸುವಂತಿಲ್ಲ. ಇದೇ ಸೇಲ್ಸ್ ಟ್ಯಾಕ್ಸ್ ಆಕ್ಟ್ ಬಗ್ಗೆ ಕೇರಳ ಹೈಕೋರ್ಟಿನವರು ಒಂದು ಜಡ್ಜ್‌ಮೆಂಟನ್ನು ಕೊಟ್ಟಿದ್ದಾರೆ. ಈ ಚೆಕ್‌ಪೋಸ್ಟ್ ನಿಂದ ಟ್ರಾನ್ಸ್‌ಪೋರ್ಟ್ ಮಾಡುವವರಿಗೆ ಅನಾನುಕೂಲವುಂಟಾಗುತ್ತದೆ ಮತ್ತು ಟ್ರೇಡ್ ಅಂಡ್ ಬಿಸಿನೆಸ್‌ಗೆ ಅನಾನುಕೂಲವಾಗುತ್ತದೆ ಎಂಬುದನ್ನು ಕೇರಳ ಹೈಕೋರ್ಟಿನವರು ಒಪ್ಪಿಕೊಂಡು, ಕೇರಳ ಸರ್ಕಾರದವರು ರಾಷ್ಟ್ರಾಧ್ಯಕ್ಷರ ಅಪ್ಪಣೆಯ ಮೇರೆಗೆ ಕಾಯಿದೆ ಮಾಡಿದ್ದರೂ ಕೂಡ ಅದು ಇನ್‌ವ್ಯಾಲಿಡ್ ಎಂದು ತೀರ್ಮಾನ ಕೊಟ್ಟಿದ್ದಾರೆ. ಅದನ್ನು ಮಾನ್ಯ ಮಂತ್ರಿಗಳು ಗಮನಿಸ ಬೇಕೆಂದು ಹೇಳಲು ಇಷ್ಟಪಡುತ್ತೇನೆ.

ಇನ್ನು ಎರಡನೆಯ ವಿಷಯವೆಂದರೆ ಇಂತಹ ಒಂದು ತಿದ್ದುಪಡಿಯನ್ನು ತರಬೇಕಾದರೆ ಅದಕ್ಕೆ ಒಂದು ಸಂದಿಗ್ಧಪರಿಸ್ಥಿತಿ ಸರ್ಕಾರಕ್ಕೆ ಇರಬೇಕು. ಅಧಿವೇಶನ ಇಲ್ಲದಿರುವ ಕಾಲದಲ್ಲ ತುರ್ತು ಆಜ್ಞೆ ಹೊರಡಿಸಬೇಕಾದರೆ ಸರ್ಕಾರದವರು ತಮಗಿರುವ ತೊಂದರೆಯನ್ನು ರಾಜ್ಯಪಾಲರಲ್ಲ ಹೇಳಿ ಕೊಂಡು ಅನಂತರ ಆಜ್ಞೆ ಹೊರಡಿಸುವುದಕ್ಕೆ ಸರ್ಕಾರಕ್ಕೆ ಅಧಿಕಾರವಿದೆ. ತುರ್ತು ಆಜ್ಞೆಯ ಬಗ್ಗೆ ಸರ್ಕಾರದವರು ಕೊಡತಕ್ಕಂಥ ಕಾರಣಗಳನ್ನು ರಾಜ್ಯಪಾಲರು ಒಪ್ಪಿಕೊಂಡರೆ ಮಾತ್ರ ಇಂತಹ ಒಂದು ತುರ್ತು ಆಜ್ಞೆ ಹೊರಡಿಸುವುದಕ್ಕೆ ಅಧಿಕಾರವಿದೆ. ಈಗ ತಂದಿರತಕ್ಕ ತಿದ್ದುಪಡಿಯನ್ನು ನೋಡುವುದಾದರೆ ಅದರಲ್ಲರತಕ್ಕಂಥ ಕೆಲವು ಕಲಂಗಳನ್ನು ನೋಡುವುದಾದರೆ ಅಂತಹ ಒಂದು ತರ್ತುಪರಿಸ್ಥಿತಿ ಇರಲಲ್ಲ ಎಂದು ಕಂಡುಬರುತ್ತದೆ. ಈ ತಿದ್ದುಪಡಿಯಲ್ಲರುವ ಎರಡು ಕ್ಲಾಸ್

(ಶ್ರೀ ಎಂ. ನಾಗಪ್ಪ)

ಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ಹಾಗೂ ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ. ಕ್ಲಾಸ್ 9 ಮತ್ತು ಕ್ಲಾಸ್ 18 ಇವೆರಡನ್ನು ದಯವಿಟ್ಟು ಗಮನಿಸಬೇಕು. ಕ್ಲಾಸ್ 9 ರಲ್ಲಿ ಈ ರೀತಿ ಹೇಳಲಾಗಿದೆ :

"9. Amendment of section 21.—In sub-section (2) of section 21 of the Principal Act, –

(i) after the words 'who is persent, may', the words 'by order for reasons to be recorded in writing' shall be inserted;

(ii) after the word 'as he may think necessary', the words 'and communicate a copy of the order to the District Magistrate who may after making such enquiry as he thinks necessary, cancel or confirm the order.' shall be inserted."

ಅನಂತರ 18ನೇ ಕ್ಲಾಸನ್ನು ನಹ ನೋಡಬೇಕು. ಅದರಲ್ಲಿ ಈ ರೀತಿಯಿದೆ :

"18. Amendment of section 60—In Section 60 of the Principal Act : in clause (*b*), the words 'or Police' shall be omitted."

ಇವೆರಡು ಕೂಡ ಈಗ ತಂದಿರತಕ್ಕಂಥ ಮನೂಡೆಯಲ್ಲಿ ಅವಶ್ಯಕವಿರಲಿಲ್ಲ. ತುರ್ತು ಆಜ್ಞೆಯ ಪ್ರಕಾರ ಈ ಎರಡು ತಿದ್ದುಪಡಿಗಳು ಜಾರಿಯಲ್ಲಿ ಬರಲಿ ಎಂದು ತಿಳಿದುಕೊಳ್ಳಬೇಕು. ಈ ತಿದ್ದುಪಡಿ ಮನೂಡೆಯ 23ನೇ ಕ್ಲಾಸನ್ನು ನೋಡಿದರೆ ಇದು ಅರ್ಥವಾಗುತ್ತದೆ. ಕ್ಲಾಸ್ 23ರಲ್ಲಿ ಈ ರೀತಿ ಹೇಳಲಾಗಿದೆ :

"23 Certain provision of Mysore Ordinance No. 4 of 1970 not to have effect.—Amendments to sub-section (2) of section 21 and section 60 of the Principal Act, by the Mysore Excise (Second Amendment) Ordinance, 1970 (Mysore Ordinance No. 4 of 1970), shall be deemed never to have been made and the provisions of sub-section (2) of section 21 and section 60 of the Principal Act as they stood prior to the said amendments, shall be and shall be deemed to continue to be in force

ಇದನ್ನು ನೋಡಿದ ನಂತರ ಈ ಎರಡು ಕಲಂಗಳನ್ನು ತುರ್ತು ಆಜ್ಞೆಯ ಮೂಲಕ ತಂದಿದ್ದು ಅನಾವಶ್ಯಕ ಎಂದು ಸರ್ಕಾರ ತೀರ್ಮಾನಕ್ಕೆ ಬಂದಿದೆ. ಮತ್ತು ಹಿಂದಿನ ಪರಿಸ್ಥಿತಿಯೇ ಇರಲಿ ಎಂಬ ತೀರ್ಮಾನಕ್ಕೆ ಸರ್ಕಾರ ಬಂದಿದೆ. ಮಾನ್ಯ ರಾಜ್ಯಪಾಲರು ಕೂಡ ತುರ್ತು ಪರಿಸ್ಥಿತಿ ಇದೆ ಎಂದು ಭಾವಿಸಿ, ತುರ್ತು ಆರ್ಡಿನೆನ್ಸ್ ಹೊರಡಿಸಿದ್ದಾರೆ. ಆ ರೀತಿ ಆರ್ಡಿನೆನ್ಸ್ ಹೊರಡಿಸುವುದಕ್ಕೆ ಮೊದಲು ಸರ್ಕಾರ ಕೂಲಂಕಷವಾಗಿ ಯೋಚನೆ ಮಾಡಿರಲಿಲ್ಲವೆಂದು ಕಾಣುತ್ತದೆ. ಸರ್ಕಾರ ಈಗ ಹೊರಡಿಸಿರತಕ್ಕಂಥ ಆಜ್ಞೆ ಅವಶ್ಯಕವಾಗಿರಲಿಲ್ಲವೆಂಬ ಮಾತನ್ನು ಮಾನ್ಯ ಮಂತ್ರಿಗಳು ಕೂಡ ತಮ್ಮ ಪ್ರಾರಂಭ ಭಾಷಣದಲ್ಲಿ ಹೇಳಿದರು. ಕೆಲವು ಲೀಟರ್ ಟ್ಯಾಕ್ಸ್ ಹಾಕಿಲ್ಲ, ಅದನ್ನು ಹಾಕಬೇಕಾಗುತ್ತದೆ. ಆದರೆ ಅದರ ಬಗ್ಗೆ ಹೈಕೋರ್ಟಿನಲ್ಲಿ ಕೇಸು ಇರುವುದರಿಂದ ಹಾಕುವುದಕ್ಕಾಗುವುದಿಲ್ಲವೆಂಬುದನ್ನು ಒಪ್ಪಿಕೊಂಡಿದ್ದಾರೆ. ಈ ಆರ್ಡಿನೆನ್ಸ್‌ನ್ನು ಆಗಸ್ಟ್ ತಿಂಗಳಲ್ಲಿ ಹೊರಡಿಸಿದ್ದಾರೆ ಸೆಪ್ಟೆಂಬರ್‌ನಲ್ಲಿ ನಭೆ ಸೇರುತ್ತದೆಂದು ಗೊತ್ತಿತ್ತು. ಆದ್ದರಿಂದ ಆರ್ಡಿನೆನ್ಸ್ ಹೊರಡಿಸುವ ಅಗತ್ಯ ಏರಲಿಲ್ಲ. ಒಂದೇ ನಲ ನಭೆಯ ಮುಂದೆ ತಿದ್ದುಪಡಿ ಮನೂಡೆಯನ್ನು ತಂದು ನಭೆಯ ಒಪ್ಪಿಗೆಯನ್ನು ಪಡೆಯುವುದಕ್ಕೆ ಅವಕಾಶವಿತ್ತು. ಈಗ ತಂದಿರತಕ್ಕ ಆಜ್ಞೆಯನ್ನು ಎರಡು ಕಾರಣದಿಂದ ಒಪ್ಪಬಾರದು, ತಿರಸ್ಕರಿಸಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಈ ತಿದ್ದುಪಡಿ ಮನೂಡೆಯ ಬಗ್ಗೆ ನನ್ನ ಕೆಲವು ಅಭಿಪ್ರಾಯಗಳನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಮುಖ್ಯವಾಗಿ ಹೇಳುವುದಾದರೆ ಈ ತಿದ್ದುಪಡಿ ಆಜ್ಞೆಯ ಪ್ರಕಾರ ಹೊಸ ಹುದ್ದೆಯ ನಿರ್ಮಾಣ ಮಾಡುತ್ತಿದ್ದಾರೆ. ಇದುವರೆಗೆ ರಾಜಸ್ವ ಮಂತ್ರಿಗಳ ಅಧೀನದಲ್ಲಿರತಕ್ಕಂಥ ಜಿಲ್ಲಾಧಿಕಾರಿಗಳೇ ಎಕ್ಸ್‌ಸೈಜ್ ಕೇಸುಗಳನ್ನು ಸಹ ನೋಡಿಕೊಳ್ಳುವ ಅಧಿಕಾರವಿತ್ತು.

ಡೆಪ್ಯುಟಿ ಕಮಿಷನರು ಹಿಂದೆ ಎಲ್ಲ ಕೆಲಸಗಳನ್ನೂ ಮಾಡಿಕೊಂಡು ಹೋಗುತ್ತಿದ್ದರು. ಇಲ್ಲಿರ ತಕ್ಕ ಡೆಫಿನಿಷನ್ ಪ್ರಕಾರ ಈಗ ಹೊಸದಾಗಿ ತಾವು ಇಲ್ಲ ಡೆಪ್ಯುಟಿ ಕಮಿಷನರ್ ಆಫ್ ಎಕ್ಸೈಜ್ ಎಂದು ಬೇರೆ ನೇಮಕ ಮಾಡಲು ಹೊರಟಿದ್ದೀರಿ. ಸರಕಾರದಲ್ಲಿ ಈಗಾಗಲೇ ಡೆಪ್ಯುಟಿ ಕಮಿಷನರು ಗಳಿರುವಾಗ ಇದಕ್ಕೆ ಪ್ರತ್ಯೇಕವಾಗಿ ಬೇರೆ ಒಬ್ಬ ಅಧಿಕಾರಿಗಳು ಏತಕ್ಕಾಗಿ ಇರಬೇಕೆಂದು ಇಲ್ಲ ಕೇಳುತ್ತೇನೆ. ಇವರಿಗೆಲ್ಲಾ ಏನು ಕೆಲಸ ಕಾರ್ಯಗಳು ಇರುತ್ತವೆ ? ಇದಲ್ಲದೆ ಬೇರೆ ಸಣ್ಣ ಪುಟ್ಟ ಮೂರನೇ ದರ್ಜೆ ನೌಕರರು ಹಾಗೂ ನಾಲ್ಕನೇ ದರ್ಜೆ ನೌಕರರುಗಳು ಇವರನ್ನು ಹೆಚ್ಚು ಮಾಡ ಬೇಕೆಂದರೆ ಸ್ವಲ್ಪ ಕೆಲಸಕಾರ್ಯಗಳು ಇರುತ್ತವೆ. ಆದರೆ ಈಗ ಹೊಸದಾಗಿ ನೇಮಕ ಮಾಡುವ ಡೆಪ್ಯುಟಿ ಕಮಿಷನರ್‌ಗಳಿಗೆ ಯಾವ ಕೆಲಸಕಾರ್ಯಗಳೂ ಇರುವುದಿಲ್ಲ. ಇದರ ಅರ್ಥ ನನಗೆ ತೋರುವುದು ಕೆಲವು ಅಧಿಕಾರಿಗಳಿಗೆ ಕೆಲವು ಪೋಸ್ಟ್‌ಗಳನ್ನು ನೀವು ಈಗ ನಿರ್ಮಾಣ ಮಾಡ ಬೇಕಾಗಿದೆ. ಇದೇ ಇದರ ಮುಖ್ಯ ಉದ್ದೇಶ. ಈಗಾಗಲೇ ಮೊರ್ಕೆಟ್ ಕಮಿಟಿಗಳಲ್ಲಿ ಇಂತಹ ಕೆಲವು ಅಧಿಕಾರಿಗಳನ್ನು ಅಡ್ಮಿನಿಸ್ಟ್ರೇಟುಗಳಾಗಿ ನೇಮಕ ಮಾಡಿದ್ದೀರಿ. ಈಚೆಗೆ ಇಂತಹ ಕಮಿಟಿ ಗಳಲ್ಲಿ ಎಲ್ಲ ಕಡೆಗಳಲ್ಲೂ ಡೂನಾವಸೆಗಳಾಗಿವೆ. ಇದರಿಂದಾಗಿ ಇಲ್ಲಿರಲು ಈ ಅಧಿಕಾರಿಗಳಿಗೆ ಈಗ ಅವಕಾಶ ಇಲ್ಲ. ಇವರೆಲ್ಲಿ ಕೆಲಸರನ್ನು ಡೆಪ್ಯುಟಿ ಕಮಿಷನರುಗಳಾಗಿ ಬಡತಿ ಮಾಡಿ ಇವರಿಗೆಲ್ಲಾ ಜಾಗ ದೊರಕಿಸಿಕೊಡಬೇಕಾಗಿದೆ. ಈಗಾಗಲೇ ಅನೇಕ ಜನ ಅಧಿಕಾರಿಗಳು ಇಲ್ಲಿಂದ ವ್ಯಾಪಸ್ಸು ಬಂದವರು ಇನ್ನೂ ಪೋಸ್ಟಿಂಗ್ ಆರ್ಡರು ಸಿಗದೆ ಕಾಯುತ್ತಿದ್ದಾರೆ ಮತ್ತು ಕೆಲವರು ರಜಾಹಮ್ಮೇರೆ ಇದ್ದಾರೆ. ಇವರಿಗೆಲ್ಲಾ ಹುದ್ದೆಗಳನ್ನು ನಿರ್ಮಾಣ ಮಾಡಲು ಈ ಬಿಲ್ಲಿನಲ್ಲ ಪ್ರತೇಕವಾದ ಒಬ್ಬರು ಡೆಪ್ಯುಟಿ ಕಮಿಷನರು ಇರಬೇಕೆಂದು ತರುತ್ತಿದ್ದಾರೆ. ಇದರಿಂದಾಗಿ ತಮಗೆ ಬೇಕಾಧವರನ್ನು ಇಲ್ಲ ನೇಮಕ ಮಾಡಬಹುದು.

Sri RAMAKRISHNA HEGDE.—That is not at all the intention of Government. This is not provided here with a view to provide employment or posts to those Deputy Commissioners.

ಶ್ರೀ ಎಂ. ನಾಗಪ್ಪ.—ತಾವು ಇಂತಹ ಮಾತನ್ನು ಇಲ್ಲಿ ಹೇಳುವುದು ಸುಲಭ. ಆದರೆ ಒಂದು ಮಾತನ್ನು ತಾವು ಇಲ್ಲಿ ಒಪ್ಪಲೇಬೇಕು. ಎಕ್ಸೈಜ್ ಇರಾಖೆಯಲ್ಲಿ ಒಬ್ಬರು ಡೆಪ್ಯುಟಿ ಕಮಿಷನರು ಎಂದು ಇದ್ದಾರೆ, ಇದನ್ನು ನಾನೂ ಒಪ್ಪುತ್ತೇನೆ. ಇದರಲ್ಲ ಪ್ರತ್ಯೇಕವಾಗಿ ಡೆಪ್ಯುಟಿ ಕಮಿಷನರ್ ಫಾರ್ ಎಕ್ಸೈಜ್ ಎಂದು ಹೇಳಿದ್ದೀರಿ. ಇದನ್ನು ಮಾಡಲು ಕಾರಣವೇನಿತ್ತು ಎನ್ನುವುದನ್ನು ತಾವು ಇಲ್ಲ ಮೊದಲು ಸ್ಪಷ್ಟಪಡಿಸಬೇಕು. ಈಗಿರತಕ್ಕ ಡೆಪ್ಯುಟಿ ಕಮೀಷನರುಗಳೇ ರೆವೆನ್ಯೂ ಕೆಲಸಗಳ ಜೊತೆಯಲ್ಲಿ ಎಕ್ಸೈಜ್ ಕೆಲಸಗಳನ್ನು ಮಾಡಿಕೊಂಡು ಬರುತ್ತಿದ್ದರು. ಡೆಪ್ಯುಟಿ ಕಮಿಷನರುಗಳು ರ್ಯಾಂಡ್ ರೆವೆನ್ಯೂ ಬಾಬಿನ ಜೊತೆಗೆ ರಾ ಅಂಡ್ ಆರ್ಡರ್ ಕೆಲಸಗಳನ್ನು ವ್ಹೊದಲಿಗೆ ಮಾಡುತ್ತಿದರು. ಇವರಿಗೆ ಇದ್ದ ಕ್ರಿಮಿನಲ್ ಪವರುಗಳನ್ನೆಲ್ಲಾ ಮ್ಯಾಜಿಸ್ಟ್ರೇಟರುಗಳಿಗೆ ಕೊಟ್ಟು ಇವರ ಅಧಿಕಾರಗಳನ್ನು ಈಗ ವಾಪಸು ತಗೆದುಕೊಂಡಿದ್ದಾರೆ. ಸೇರ್ಸ್ ಟ್ಯಾಕ್ಸ್ ರಿಕವರಿ ಬೇರೆ ಇತ್ತು.

Sri RAMAKRISHNA HEGDE.—The existing provision says:

> "Deputy Commissioner' means any person appointed under Section 4 to exercise the powers and to perform the duties of a Deputy Commissioner under this Act and where no such person is appointed, the Deputy Commissioner of the revenue district".

So the provision already exists, but unfortunately in the existing Act, Deputy Commissioner has not been defined in Section 4, as to who is that Deputy Commissioner. We have only clarified that in this amendment. That is all It is not a new clause.

ಮಾನ್ಯ ಸದಸ್ಯರು ಈ ಆಕ್ಟಿನ ಕ್ಲಾಸ್ 4ರಲ್ಲಿರುವುದನ್ನು ನೋಡಿದರೆ ನಾನು ಮೇಲೆ ಹೇಳಿರು ವುದು ಸ್ಪಷ್ಟವಾಗಿ ಗೊತ್ತಾಗುತ್ತದೆ.

Sri D. B. KALMANKAR.—Are you not intending to create new posts of Deputy Commissioners of Excise? As it is, Deputy Commissioners have got powers under this Act to use the powers of Deputy

(Sri D. B. Kalmankar)

Commissioner. He is doing this work in addition to his work as Deputy Commissioner, but now you intend to create a new class exclusively for the purpose of administration of this Act. Is it not a fact ?

Sri RAMAKRISHNA HEGDE.—The hon. Member has not understood the scheme of the Act. Under the existing Act Deputy Commissioner means any person appointed under Section 4 to exercise the powers and perform the duties of a Deputy Commissioner under this Act. So provision was there for appointment of Deputy Commissioners other than Revenue Deputy Commissioners. It is not a new creation. Even when the Act was first brought before the House the intention was there that whenever contingency arises there should be provision for the appointment of exclusive Deputy Commissioners for Excise. Here what we have tried to do is only to clarify the position further beyond doubt. That is all.

ಶ್ರೀ ಎಂ. ನಾಗಪ್ಪ.—ಮಾನ್ಯ ಮಂತ್ರಿಗಳು ಹೇಳುವುದನ್ನು ನಾನು ಒಪ್ಪುವುದಕ್ಕೆ ಸರಿಯಾದ ಕಾರಣಗಳು ಇಲ್ಲಲ್ಲ. ಇಲ್ಲ ಮಾನ್ಯ ಮಂತ್ರಿಗಳು ಮಂಡಿಸಿರುವ ಬಿಲ್ಲನಲ್ಲರುವ 'ಫೈನಾನ್ಷಿಯರ್' ಮೆಮೊರ್ಯಾಂಡಂನಲ್ಲಿ ಅವರೇ ಈ ರೀತಿ ಹೇಳಿದ್ದಾರೆ. ಕ್ಲಾಸ್ 4 (ಎ) ದ ಬಗ್ಗೆ ಹೀಗೆ ಹೇಳಿದ :

> "Clause 4A of the Bill provides for appointment of Deputy Commissioners of Excise. There is already at present one Deputy Commissioner of Excise. The recurring and non-recuring expenditure at present is Rs. 27,442 per annum and Rs. 41,700 respectively. The current year's budget already provides for cost of furniture, etc. In case circumstances warrant, additional posts may have to be created in future and the expenditure in respect of each post and establishment will be as specified above."

ಈ ದೃಷ್ಟಿಯಿಂದ ನಾನು ಹೇಳುವುದು ತಾವು ಇಲ್ಲಿ ಎಕ್ಸೈಜ್ ಡೆಪ್ಯುಟಿ ಕಮಿಷನರು ಎಂದು ಬೇರೆ ಒಂದು ಹುದ್ದೆಯನ್ನು ಬೇರೆ ಹೆಸರು ಕೊಟ್ಟು ಇಟ್ಟಿದ್ದೀರಿ ಅಷ್ಟೇ. ಇದಕ್ಕೆ ಮೊದಲು ಡೆಪ್ಯುಟಿ ಕಮಿಷನರವರು ರೆವೆನ್ಯೂ ಕೆಲಸಗಳ ಜೊತೆಯಲ್ಲಿ ಇದರ ಕೆಲಸಗಳನ್ನೂ ನಿರ್ವಹಿಸುತ್ತಿದ್ದರು. ಇಲ್ಲ ಇಂತಹ ಹೊಸ ತಿದ್ದುಪಡಿ ತರುವ ಅವಶ್ಯಕತೆಯಾದರೂ ಏನಿತ್ತು ? ನೀವೇ ಕೊಟ್ಟಿರುವ ಫೈನಾನ್ಷಿಯರ್ ಮೆಮೊರ್ಯಾಂಡಂನಲ್ಲಿ ಇದನ್ನು ಸ್ಪಷ್ಟವಾಗಿ ಹೇಳಿದ್ದೀರಿ. ಇದರ ಲೆಕ್ಕಗಳನ್ನೂ ಹೇಳಿರಾಗಿದೆ. ಇವೊತ್ತು ಹೆಚ್ಚು ಸಂಖ್ಯೆಯಲ್ಲಿ ಡೆಪ್ಯುಟಿ ಕಮಿಷನರುಗಳು ಇದ್ದಾರೆ ಎಂದು ಜಿ. ಎ. ಡಿ. ಕಡೆಯಿಂದ ಲಸ್ಟು ಕೂಡ ತರಿಸಿಕೊಂಡಿದ್ದಾರೆ ಎಂದು ನನಗೆ ತಿಳಿದಿದೆ. ಇದುವರೆಗೂ ಅಸಿಸ್ಟೆಂಟ್ ಕಮಿಷನರುಗಳಿಗೆ ಬಡತಿ ಕೊಟ್ಟು ಡೆಪ್ಯುಟಿ ಕಮಿಷನರುಗಳಾಗಿ ಬರುತ್ತಿದ್ದರು. ಈಗ ಕೆಲವು ಐ. ಎ. ಎಸ್. ಅಧಿಕಾರಿಗಳಾಗಿರುವವರು ಡೆಪ್ಯುಟಿ ಕಮಿಷನರ್ ದರ್ಜೆಯಲ್ಲದ್ದು, ಮಾರ್ಕೆಟ್ ಕಮಿಟಿಗಳಲ್ಲಿ ಹಾಗೂ ಇನ್ನಿತರ ಕಡೆಗಳಲ್ಲಿ ಅಡ್ಮಿನಿಸ್ಟ್ರೇಟರುಗಳಾಗಿ ಕೆಲಸ ಮಾಡುತ್ತಿದ್ದರು. ಈಚೆಗೆ ಈ ಕಮಿಟಿಗಳಲ್ಲಿ ಎರೆಕ್ಷನ್ ಮುಗಿದಾಗಿರುವುದರಿಂದ ಇಂತಹ ಅಧಿಕಾರಿಗಳಿಗೆ ಈಗ ಜಾಗವಿಲ್ಲದಂತಾಗಿದೆ. ಬೇರೆ ಸ್ಥಳಗಳನ್ನು ಇವರಿಗೆಲ್ಲಾ ಒದಗಿಸಿಕೊಡಬೇಕಾಗಿದೆ. ಇದಕ್ಕಾಗಿ ತಾವು ಸ್ಥಳಗಳನ್ನು ಕೊಡಬೇಕು ಎನ್ನುವುದು ಇಲ್ಲ ತಂದಿರುವ ಅಮೆಂಡ್‌ಮೆಂಟ್ ಬಿಲ್ಲನಲ್ಲರುವ ಫೈನಾನ್ಷಿಯರ್ ಮೆಮೊರ್ಯಾಂಡಂನಿಂದ ಸ್ಪಷ್ಟವಾಗುತ್ತದೆ. ಇದರಲ್ಲ ತಾವು ಇನ್ನೂ ಒಂದು ವಿಚಾರವನ್ನು ಗಮನಕ್ಕೆ ತೆಗೆದುಕೊಳ್ಳಬೇಕು: ನಮ್ಮ ರಾಜ್ಯದಲ್ಲಿ ಐ. ಎ. ಎಸ್. ಅಧಿಕಾರಿಗಳಾಗಿ ಅಸಿಸ್ಟೆಂಟ್ ಕಮಿಷನರುಗಳಾಗಿ ಬಂದವರು ಒಂದೆರಡು ಮೂರು ವರ್ಷಗಳಿಗಾಗಿಯೇ ಡೆಪ್ಯುಟಿ ಕಮಿಷನರುಗಳ ದರ್ಜೆಗೆ ಬರುತ್ತಾರೆ. ಇವರಿಗೆಲ್ಲಾ ಸರಿಯಾದ ತರಬೇತಿಕೊಟ್ಟು, ಐದು ವರ್ಷಗಳಾದ ಮೇಲೆ ಡೆಪ್ಯುಟಿ ಕಮಿಷನರಾಗಿ ಕೆಲಸ ಮಾಡುವ ಅವಕಾಶ ಇರಬೇಕೆಂದು ಇಲ್ಲ ಸರಕಾರ ನಿಗದಿ ಮಾಡಿಲ್ಲ.

ಆದರೆ ಆಂಧ್ರ ಸರ್ಕಾರದವರು ಅವರಿಗೆ ಐ.ಎ.ಎಸ್. ಕೋಟಾದಲ್ಲಿ ಬಂದ ಅಧಿಕಾರಿಗಳನ್ನು ಅಲ್ಲಿ ಅಸಿಸ್ಟೆಂಟು ಕಮಿಷನರಾಗಿ ಆಯ್ಕೆಯಾಗಿದ್ದರೂ ಅವರನ್ನು ಹತ್ತು ವರ್ಷಗಳಾಗುವುದಕ್ಕೆ ಮುಂಚೆ ಡೆಪ್ಯುಟಿ ಕಮಿಷನರ ದರ್ಜೆಗೆ ಏರಿಸುವುದಿಲ್ಲ ಎಂದು ನಿಗದಿ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಇಂತಹ ನಿರ್ಬಂಧ ಯಾವುದೂ ಇಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಈಗಿರುವ ರೂಲ್ಸು ಪ್ರಕಾರ ಇಂತಹ ಅಧಿಕಾರಿಗಳಿಗೆ ಐದು ವರ್ಷಗಳಾದ ಮೇಲೆ ಬಡತಿಯನ್ನು ಕೊಡಲೇ ಬೇಕಾಗಿದೆ.

ಶ್ರೀ ಎಂ. ನಾಗೆಪ್ಪ.—ಮಾನ್ಯ ಮಂತ್ರಿಗಳಿಗೆ ಬೇಕಾದರೆ ನಾನು ಆಂಧ್ರದಲ್ಲಿ ಯಾವ ರೀತಿ ಇದೆ ಎನ್ನುವುದಕ್ಕೆ ಉದಾಹರಣೆಯನ್ನು ತಂದು ಕೊಡುತ್ತೇನೆ. ನಮ್ಮ ರಾಜ್ಯದಲ್ಲಲ್ಲಿರುವ ನಿಯಮದಲ್ಲಿ ಆ ರೀತಿ ಇಲ್ಲ ಎನ್ನುವುದನ್ನು ತಮಗೆ ಇಲ್ಲಿ ಆರಿಕೆ ಮಾಡಬೇಕಾಗಿದೆ. ಇವರ ಸರ್ವಿಸ್ಸು ಅನುಭವ ಮತ್ತು ವಿದ್ಯಾರ್ಹತೆಗಳನ್ನೆಲ್ಲಾ ನೋಡಿ ಇವರನ್ನು ನೇಮಕ ಮಾಡಿದರೆ ಇದರಲ್ಲಿ ಏನೂ ತಪ್ಪಾಗುವುದಿಲ್ಲ.

5-30 P.M.

ಈಪೊತ್ತು ನೀವು ಇದರಲ್ಲಿ ಈಕ್ವಿವಲೆಂಟ್ ಡೆಪ್ಯೂಟಿ ಕಮಿಷನರ್ ಆಗಿರಬೇಕು ಎಂದು ಹೇಳುತ್ತೀರಿ. The Superintendent can also function as a Deputy Commissioner if Government vests those powers in him. ನಿಮ್ಮಲ್ಲಿ ಆರ್ಮಿ ಆಫ್ ಆಫೀಸರ್ಸ್ ಇದ್ದಾರೆ. ಪ್ರೊಹಿಬಿಷನ್ ತೆಗೆದು ಹಾಕಿ. ಇಲ್ಲಿ ಬರತಕ್ಕಂಥ ಆದಾಯವನ್ನು ಎಂಪ್ಲಾಯೀನೇ ತಿಂದು ಬಿಡುತ್ತಾರೆ. ಈ ರೀತಿ ಹಣ ದುರುಪಯೋಗ ಮಾಡುತ್ತೀರಿ ಎಂದು ನನ್ನ ಅಭಿಪ್ರಾಯವನ್ನು ಸ್ಪಷ್ಟಪಡಿಸುತ್ತೇನೆ.

ಇನ್ನು ಎರಡನೆಯದಾಗಿ ಕೆಲವು ತಿದ್ದುಪಡಿಗಳನ್ನು ನೋಡಿದರೆ ನನಗೆ ಬಹಳ ಆಶ್ಚರ್ಯವಾಗುತ್ತದೆ. ಮೊದಲನೆಯದಾಗಿ ಕಾನ್ಸ್ಟಿಟ್ಯೂಷನ್ನಿನ ಆರ್ಟಿಕಲ್ 50 ದಯವಿಟ್ಟು ಗಮನಿಸಬೇಕು. ಅದು ಈ ರೀತಿ ಇದೆ :

"The State shall take steps to separate the Judiciary from the Executive in the Public Service of the State".

ಈಪೊತ್ತು ತಾವು ಏನು ಮಾಡುತ್ತಿದ್ದೀರಿ ಎಂದರೆ ಜುಡಿಷಿಯಲ್ ಪವರ್ಸ್‌ನ್ನು ಎಕ್ಸಿಕ್ಯೂಟೀವ್ ಅಧಿಕಾರಿಗಳಿಗೆ ಕೊಡುತ್ತಿದ್ದೀರಿ. ಕ್ಲಾಸ್ 12 ಸೆಕ್ಷನ್ 45-ಎ ಈ ರೀತಿ ಇದೆ :

"12. *Insertion of new section 45-A.*—After Section 45 of the Principal Act, the following section shall be inserted, namely :

45-A. Imposition of penalty by Excise Officers.— (1) If a holder of a licence or permit granted under this Act or an employee of such holder contravenes any of the conditions of the licence or permit or of any rule made under this Act, the Deputy Commissioner, or any other Excise Officer authorised by the State Government in this behalf, may impose a penalty not exceeding two hundred rupees '.

ಈ ತರಹ ಒಂದು ಕಾಯಿದೆ ಮಾಡುವುದನ್ನು ನೋಡಿದರೆ, ಒಂದೇ ತರಹ ಆಫೆನ್ಸಸ್ ಬಹಳ ಇದೆ. ಕೋರ್ಟಿಗೆ ಇರುವ ಅಧಿಕಾರವನ್ನು ಎಕ್ಸಿಕ್ಯೂಟೀವ್ ಆಫೀಸರ್ಸ್‌ಗೆ ಕೊಟ್ಟಿದ್ದೀರಿ. ಪ್ರಿನ್ಸಿಪಲ್ ಆಕ್ಟ್‌ನ ಸೆಕ್ಷನ್ 36 ಈ ರೀತಿ ಇದೆ :

"36. *Penalty for Misconduct of Licensee, etc.*— (1) Whoever being the holder of a licence or permit granted under this Act, or being in the employ of such holder and acting on this behalf :—

(a) fails to produce such licence or permit on the demand of any Excise officer or of any other person duly empowered to make such demand ; or

(ಶ್ರೀ ಎಂ. ನಾಗಪ್ಪ)

(*b*) wilfully does or omits to do, anything in breach of any of the conditions of his licence, or permit, not otherwise provided for in this Act....''

45-ಎ ನಲ್ಲಿ ಇರತಕ್ಕಂಥ ಸೆಕ್ಷನ್ನಿಗೂ ಇದಕ್ಕೂ ಏನು ವ್ಯತ್ಯಾಸವನ್ನು ಕಲ್ಪಿಸಿಕೊಂಡಿದ್ದೀರೋ ನನಗಂತೂ ಗೊತ್ತಿಲ್ಲ.

ಇನ್ನು ತುರ್ತು ಅಜ್ಜೆಯ ಸೆಕ್ಷನ್ 14ನ್ನು ತಾವು ನೋಡಬೇಕು. ಅದನ್ನು ಸ್ವಲ್ಪ ತಿದ್ದುಪಾಟು ಮಾಡಿ ಸೆಕ್ಷನ್ 35-36ರಲ್ಲಿ ಇರುವುದನ್ನು ತಿದ್ದುಪಾಟು ಮಾಡಿ ಎಗ್ಸಿಕ್ಯೂಟಿವ್ ಅಧಿಕಾರಿಗಳಿಗೆ ಅಧಿಕಾರ ಕೊಡುತ್ತಿದ್ದೀರಿ. ತುರ್ತು ಅಜ್ಜೆಕ್ಲಾಸ್ 14ನ್ನು ಓದುತ್ತೇನೆ. ಅದು ಈ ರೀತಿ ಇದೆ :

''If a licensee or a person in his employ is guilty of an offence punishable under section 35 or sect on 36, the Deputy Commissioner or any other Excise Officer duly empowered by the State Government in this behalf may impose a penalty''

14ನೇ ಕ್ಲಾಸ್‌ನಲ್ಲರುವುದನ್ನು ಈ ಬಿಲ್ಲಿನಲ್ಲಿ 12ನೇ ಕ್ಲಾಸಿಗೆ ಪರಿವರ್ತಿಸಿದ್ದೀರಿ. 45-ಎ ಸೆಕ್ಷನ್‌ನಲ್ಲಿ ಹೇಳಿರುವುದನ್ನೇ 49-ಎ ಸೆಕ್ಷನ್‌ನಲ್ಲಿ ಹೇಳಿದ್ದೀರಿ. ಡೆಪ್ಯೂಟಿ ಕಮಿಷನರಾಗಲೀ ಎಕ್ಸೈಜ್ ಆಫೀಸರಾಗಲೀ ಆ ಸೆಕ್ಷನ್ ಪ್ರಕಾರ ಶಿಕ್ಷೆಯನ್ನು ಕೊಡಬಹುದು ಎಂದು ಹೇಳಿದ್ದಾರೆ. ಅದೇ ಪ್ರಕಾರ 45-ಎ ನಲ್ಲಿ ನಮೂದಿಸಿದ್ದೀರಿ. ಇದರ ಬಗ್ಗೆ ಒಂದು ಅಧಿಕಾರ ಸೆಕ್ಷನ್ 36 ಪ್ರಕಾರ ಕೋರ್ಟಿಗೆ ಇದೆ. ಈಗ ತಾವು ಅಧಿಕಾರವನ್ನು ಎಕ್ಸಿಕ್ಯೂಟಿವ್‌ಗೆ ಕೊಡುತ್ತಿದ್ದೀರಿ. ಒಂದೇ ತಪ್ಪು ಮಾಡಿದಂಥ ವ್ಯಕ್ತಿಗಳಿಗೆ 2 ತರಹ ಕಾನೂನುಗಳು, 2 ತರಹ ಕೋರ್ಟು, 2 ತರಹ ಪ್ರೊಸೀಜರ್ಸ್ ಇರುವುದನ್ನು ಗಮನಿಸಬೇಕು. ಇಂತಹ ತಿದ್ದುಪಡಿ ತರಲಿಕ್ಕೆ ತಮಗೆ ಅಧಿಕಾರ ಇದೆಯೇ? ನಾನು ಆಗಲೇ ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೇನೆ. ಒಂದೇ ತರಹ ತಪ್ಪಿಗೆ ಒಬ್ಬ ವ್ಯಕ್ತಿಗೆ ಬೇರೆ ಬೇರೆ ಕಾನೂನುಗಳನ್ನು ಮಾಡಿ, ಬೇರೆ ಬೇರೆ ಶಿಕ್ಷೆ ವಿಧಿಸಲಿಕ್ಕೆ ತಮಗೆ ಬರುತ್ತದೆಯೇ! ಇದು ರಾಜ್ಯಾಂಗದ ಆರ್ಟಿಕಲ್ 14ಕ್ಕೆ ವಿರುದ್ಧವಾಗಿದೆ ಎಂದು ನಾನು ಹೇಳುತ್ತೇನೆ. ರಾಜ್ಯಾಂಗದ ಆರ್ಟಿಕಲ್ 14 ಈ ರೀತಿ ಇದೆ :

''Equality before law—The State shall not deny to any person equality before the law or the equal protection of the laws within the territory of India''.

ಈ ರೀತಿ ಒಂದೇ ಅಪರಾಧ ಮಾಡತಕ್ಕಂಥ ಜನರಿಗೆ ಬೇರೆ ಬೇರೆ ಪ್ರೊಸೀಜರ್ ಇರುವುದು ಸಾಧುವಲ್ಲ ಎಂದು ಹೇಳಿದೆ. 45-ಎ ಮತ್ತು 36 ಸೆಕ್ಷನ್ಸ್ ನೋಡಿದರೆ ಒಂದೇ ತರಹ ಅಪರಾಧಕ್ಕೆ ಒಬ್ಬ ವ್ಯಕ್ತಿಗೆ ಒಂದು ದೃಷ್ಟಿಯಿಂದ ನೋಡುವುದು ಇನ್ನೊಬ್ಬ ವ್ಯಕ್ತಿಗೆ ಇನ್ನೊಂದು ದೃಷ್ಟಿಯಿಂದ ನೋಡುವುದು, ತಮಗೆ ಬೇಕಾದವರಿಗೆ ಮಾಫಿ ಮಾಡಬಹುದು, ಬೇಡವಾದಂಥ ವ್ಯಕ್ತಿಯನ್ನು ಕೋರ್ಟಿಗೆ ಕಳುಹಿಸಿ ಆ ಪ್ರಕಾರ ಹೆಚ್ಚು ಶಿಕ್ಷೆಯನ್ನು ಮಾಡಿಸಬಹುದು. ಈ ಮಾನ್ಯ ಸಭೆಯಲ್ಲಿ ಹಿಂದೆ ನಿರಂಜನ್ ಕೇಸ್ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದೇವೆ. ರಾಜ್ಯದಲ್ಲಿ ಎಕ್ಸಿಕ್ಯೂಟಿವ್‌ಗೆ ಶಿಕ್ಷೆ ಕೊಡತಕ್ಕಂಥ ಅಧಿಕಾರ ಕೊಡುವುದು ರಾಜ್ಯಾಂಗ ಬದ್ಧವಾಗಿ ಇಲ್ಲ. ಆದುದರಿಂದ 45-ಎ ಕಾಲಂನಲ್ಲಿ ಏನು ತಂದಿದ್ದಾರೆ ಅದು ರಾಜ್ಯಾಂಗ ಬದ್ಧವಾಗಿಲ್ಲ ಎಂದು ಅದನ್ನು ನಾನು ಬಹಳ ವಿರೋಧಿಸುತ್ತೇನೆ. ಅವರಿಗೆ ಬೇಕಾದರೆ ಅನೇಕ ಸುಪ್ರೀಂಕೋರ್ಟು ಜಡ್ಜ್‌ಮೆಂಟ್‌ಗಳನ್ನೂ ಕೊಡುತ್ತೇನೆ. ಪೇಜು ನಂಬರ್ 370ರಲ್ಲಿ ಅಲಹಾಬಾದ್ ಹೈಕೋರ್ಟು ಫುರ್ ಬೆಂಚ್ ಡಿಸಿಷನ್ 1960ರಲ್ಲಿ ಏನು ಇದೆಯೋ ಅದನ್ನು ಓದುತ್ತೇನೆ. ಅದು ಈ ರೀತಿ ಇದೆ :

''The phrase 'equal protection of the laws' means in essence the right to equal treatment in similar circumstances. It does not provide a guide as to what those circumstances shall be. The right is equally observed if the law makes all prosecutions for a particular offence subject to the sanction of a prescribed authority or if it provides that no such sanction is necessary.

It is violated if, without reasonable grounds, it provides that sanction shall be necessary in some cases and not in others."

ಇದರಲ್ಲಿ ಇರತಕ್ಕುದು ಒಂದೇ ಒಂದು. ಉತ್ತರ ಪ್ರದೇಶದಲ್ಲಿ ಒಂದು ನದಿ ಹರಿಯುತ್ತದೆ. ನದಿಯ ಈ ಭಾಗಕ್ಕೆ ಇರತಕ್ಕ ಪ್ರದೇಶದಲ್ಲಿ ಆರ್ಮ್ಸ್ ಆಕ್ಟ್ ಪ್ರಕಾರ ಲೈಸೆನ್ಸ್ ಹೊಂದದಹಾಗೆ ಪ್ರಾಸಿಕ್ಯೂಟ್ ಮಾಡಬೇಕಾದರೆ ಒಬ್ಬ ಅಧಿಕಾರಿ ಸ್ಯಾಂಕ್ಷನ್ ಕೊಡಬಹುದು. ನದಿಯ ಆಚೆ ದಂಡೆಗೆ ಇರತಕ್ಕ ಪ್ರದೇಶದಲ್ಲಿ ಅಂಥ ಸ್ಯಾಂಕ್ಷನ್ ಬೇಕಾಗಿಲ್ಲ, ಅವರನ್ನು ಪ್ರಾಸಿಕ್ಯೂಟ್ ಮಾಡಬಹುದು. ಅಂಥ ಒಂದು ತಿದ್ದುಪಡಿಯನ್ನು ಉತ್ತರ ಪ್ರದೇಶದ ವಿಧಾನ ಸಭೆ ಪಾಸ್ ಮಾಡಿದುದನ್ನು; ಅಲಹಾಬಾದ್ ಹೈಕೋರ್ಟ್ ತೀರ್ಮಾನದ ಪ್ರಕಾರ, ಅಂಥ ರಿಸ್ಟ್ರಿಕ್ಷನ್ ಹಾಕುವುದಕ್ಕೆ ಸಾಧ್ಯವಿಲ್ಲ, ಒಂದು ಭಾಗದಲ್ಲಿರುವವರಿಗೆ ಪರ್ಮಿಷನ್ ಬೇಕು ಇನ್ನೊಂದು ಭಾಗದಲ್ಲಿರುವವರಿಗೆ ಪರ್ಮಿಷನ್ ಬೇಡ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ, ಆ ತಿದ್ದುಪಡಿ ಇನ್‌ವ್ಯಾಲಿಡ್ ಇವೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

1952ನೇ ಸುಪ್ರೀಂ ಕೋರ್ಟಿನ ತೀರ್ಮಾನವನ್ನು ತಾವು ಗಮನಿಸಬಹುದು :

"The impugned Act has completely ignored the priniciples of classification followed in the Criminal Procedure Code and it proceeds to lay down the new procedure without making any attempt to particularise or classify the evidences or cases to which it has to apply ".

ಅದರಂತೆ ಇಲ್ಲಿ ಸೇರಿಸಿದ ಕೆಲವು ಪ್ರೊಸೀಜರ್ ನೋಡಿ ಈಗ ತಂದಿರತಕ್ಕ ಆಕ್ಟ್‌ನಲ್ಲಿ 36ನೇ ಸೆಕ್ಷನ್ ಪ್ರಕಾರ ಮಾಡಿದಂಥ ಅಪರಾಧಕ್ಕೆ ಕ್ರಿಮಿನಲ್ ಪ್ರೊಸೀಜರ್ ಕೋಡ್ ಅಪ್ಲೈ ಆಗುತ್ತದೆ. ಈಗ ತಂದಿರುವ ಆಕ್ಟ್ ಪ್ರಕಾರ ಒಂದು ನೋಟೀಸ್ ಕೊಟ್ಟು ಎಕ್ಸ್‌ಪ್ಲನೇಷನ್ ಕೊಡಿ ಎಂದು ಕೇಳಿ ನಂತರ ದಂಡ ಹಾಕಬಹುದು ಅಥವಾ ಶಿಕ್ಷೆ ವಿಧಿಸಬಹುದು. ಇಬ್ಬರಿಗೂ ಬೇರೆ ಬೇರೆ ಪ್ರೊಸೀಜರ್ ಅಡಾಪ್ಟ್ ಮಾಡಿದ್ದಾರೆ. ಅದು ರಾಜ್ಯಾಂಗಕ್ಕೆ ವಿರೋಧವಾಗಿದೆ.

1955ರಲ್ಲಿ ಸುಪ್ರೀಂ ಕೋರ್ಟಿನಲ್ಲಿ ಇನ್‌ಕಂ ಟ್ಯಾಕ್ಸ್‌ಗೆ ಸಂಬಂಧಪಟ್ಟಂತೆ ಎವೇಷನ್ ಆಫ್ ಟ್ಯಾಕ್ಸ್ ಮಾಡಿದ್ದರೆ ಅಂಥವರಿಗೆ ಬೇರೆ ಕೋರ್ಟ್‌ಗೆ ಕಳುಹಿಸಬೇಕು ಎನ್ನುವ ಕ್ಲಾಜ್ ತಿದ್ದುಪಡಿ ಯಾದಂಥ ಸಂದರ್ಭದಲ್ಲಿ ಪಾರ್ಲಮೆಂಟಿನಲ್ಲಿ ಅತುರಾತುರವಾಗಿ ಮಾಡಿದರು. ಆ ಕ್ಲಾಜನ್ನು ಕೂಡ ಸುಪ್ರೀಂ ಕೋರ್ಟಿನವರು ಹೊಡೆದು ಹಾಕಿದ್ದಾರೆ. ಒಬ್ಬೊಬ್ಬರಿಗೆ ತಾರತಮ್ಯ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ.

ಡೆಪ್ಯುಟಿ ಕಮಿಷನರ್ ಆಫ್ ಎಕ್ಸೈಸ್ ಅಥವಾ ಅವರ ಅಪ್ಪಣೆ ಪಡೆದ ಅಧಿಕಾರಿ, ಎಂದರೆ ಒಬ್ಬ ಇನ್‌ಸ್ಪೆಕ್ಟರ್ ಆಗಬಹುದು, ಸಬ್ ಇನ್‌ಸ್ಪೆಕ್ಟರ ಆಗಬಹುದು, ಕಾನ್‌ಸ್ಟೇಬರ್ ಸಹಿತ ಆಗಬಹುದು. ಇಂಥ ಕೆಲವು ಕ್ಲಾಜುಗಳನ್ನು ಈ ಕಾಯಿದೆಯಲ್ಲಿ ಸೇರಿಸಿರುವುದರಿಂದ ಇದು ರಾಜ್ಯಾಂಗದ ಕೆಲವು ಆರ್ಟಿಕಲ್‌ಗಳಿಗೆ ವಿರೋಧವಾಗುತ್ತದೆ, ಇವುಗಳಿಗೆ ಒಪ್ಪಿಗೆಯನ್ನು ಕೊಡುವುದಕ್ಕಾಗುವುದಿಲ್ಲ ಎನ್ನುವ ಭಾವನೆಯನ್ನು ನಾನು ಇಟ್ಟುಕೊಂಡಿದ್ದೇನೆ. ಇನ್ನೂ ಅನೇಕ ಮಾನ್ಯ ಸದಸ್ಯರು ಮಾತನಾಡುತ್ತಾರೆಂದು ಕೇಳಿದ್ದೇನೆ. ಈ ಸಭೆಯ ಮಾನ್ಯ ಸದಸ್ಯರು ನಾನು ತಂದಂಥ ಸೂಚನೆಯನ್ನು ಒಪ್ಪಿ, ಆರ್ಡಿನೆನ್ಸ್ ಬದಲಾಗಿ ಮಾನ್ಯ ಮಂತ್ರಿಗಳು ತಂದಂಥ ಬಿಲ್ಲನ್ನು ವಿರೋಧಿಸಿ, ಅದನ್ನು ಸಭೆ ತಿರಸ್ಕರಿಸಬೇಕು ಎಂದು ಹೇಳಿ ನನ್ನ ನಾಲ್ಕು ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ವಿ. ಐತಾಳ (ಸುರತ್ಕಲ್).—ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಅರ್ಥಸಚಿವರು ಬಹಳ ಸಾಧುವಾದ ಒಂದು ಗೋವಿನ ರೂಪದಲ್ಲಿ ಈ ತಿದ್ದುಪಡಿ ಆಕ್ಟ್ ತಂದು, ಗೋವಿನ ಮುಖ ತಳೆದಿರುವ ವ್ಯಾಘ್ರದಂತಹ ಒಂದು ಕಾನೂನನ್ನು ನಮ್ಮ ರಾಜ್ಯದಲ್ಲಿ ಜಾರಿಗೆ ತರಲು ಈ ತಿದ್ದುಪಡಿಯನ್ನು ತಂದಿದ್ದಾರೆಂದು ಹೇಳುವುದಕ್ಕೆ ನನಗೆ ಬಹಳ ಬೇಸರವಾಗುತ್ತದೆ. ಲೇಟರ್ ಫೀವನ್ನೂ ಮಾಡುವುದಕ್ಕೆ ನಮ್ಮಲ್ಲಿ ಪ್ರಾವಿಷನ್ ಇರಲಿಲ್ಲ, ಅದಕ್ಕೋಸ್ಕರ ಈ ಕಾನೂನು ತಂದಿದ್ದಾಗಿದೆ ಎಂದು ಹೇಳುತ್ತಾರೆ. ಎರಡನೆಯದಾಗಿ ಸ್ಟಾಚ್ಯೂಟರಿ ರೆಕಗ್ನಿಷನ್ ಕೆಲವು ಅಧಿಕಾರಿಗಳಿಗೆ ಕೊಡಬೇಕಾಗಿತ್ತು ಎಂದೂ ಹೇಳುತ್ತಾರೆ. ಮೂರನೆಯದಾಗಿ ಕೇಸುಗಳು ಬೇಗ ತೀರ್ಮಾನವಾಗಬೇಕು ಎಂಬ ಉದ್ದೇಶದಿಂದ ನಮ್ಮಿರಿ ಟ್ರಯಲ್‌ಗೆ ಅವಕಾಶವನ್ನು ಕಲ್ಪಿಸಲಾಗಿದೆ ಎಂದು ಹೇಳಿದ್ದಾರೆ. ಅದೆಲ್ಲವನ್ನೂ ಒಪ್ಪಿಕೊಳ್ಳೋಣ ಈ ಮೇಲಿನ ಉದ್ದೇಶಗಳಿಗೆ ವಿರೋಧವಾದ ತಿದ್ದುಪಡಿಗಳನ್ನೂ ಇದರಲ್ಲಿ ತಂದಿದ್ದಾರೆಂದು ಹೇಳಬಹುದು. ಮಂಗಕ್ಕೆ ಕಳ್ಳು ಕುಡಿಸಿ, ಮಧ್ಯದಲ್ಲಿ

(ಶ್ರೀ ಪಿ. ವಿ. ಐತಾಳ)

ಚೇಳು ಕಡಿಸಿದರೆ ಯಾವ ರೀತಿ ಆಗುತ್ತದೆಯೋ ಹಾಗೆ ಎಕ್ಸ್‌ಸೈಸ್ ಡಿಪಾರ್ಟಮೆಂಟಿನ ಕೆಲವು ಕೆಳ ತರಗತಿಯ ಅಧಿಕಾರಿಗಳಿಗೆ ಅಪಾರವಾದ ಅಧಿಕಾರಗಳನ್ನು ಕೊಟ್ಟು ಮರ್ಕಟನ್ಯ ಸುರಾ ಪಾನಂ ಎನ್ನುವ ರೀತಿಯಲ್ಲಿ ಅವರನ್ನು ನೋಡುವಂತಾಗಿದೆ. ಎಕ್ಸೈಸ್ ಇನ್‌ಸ್ಪೆಕ್ಟರ್, ಎಕ್ಸೈಸ್ ಸಬ್‌ಇನ್‌ಸ್ಪೆಕ್ಟರ್.....

ಒಬ್ಬ ಮಾನ್ಯ ಸದಸ್ಯರು.—ಮರ್ಕಟ ಎಂದರೆ ಯಾರು ಎನ್ನುವುದನ್ನು ಮಾನ್ಯ ಸದಸ್ಯರು ಹೇಳುತ್ತಾರೆಯೇ ?

ಶ್ರೀ ಪಿ. ವಿ. ಐತಾಳ.—ನಮ್ ಆಫ್‌ದಿ ಎಕ್ಸೈಸ್ ಅಫಿಷಿಯಲ್ಸ್ ಆಫ್ ದಿ ಲೋಯರ್ ಗ್ರೇಡ್.

[Mr. Deputy Speaker in the Chair]

The amendments appear to be innocuous. You however thereby usurp the rights of the citizens. Firstly under Section 5A (2) you have given the right of trial to the Superintendents of Excise and Deputy Superintendents of Excise. The said officers have been given the Powers of holding an enquiry and give Judgement. I have not seen anywhere in any country an executive Officer being given the power to try the offences and give judgement.

Sri RAMAKRISHNA HEGDE.—May I draw the attention of the Hon. Member to Kerala Abkari Act. He is well versed with the Kerala Laws also. Minor functions are given to expedite the cases in our State.

Sri P. V. AITHALA.—Under the existing Excise Act Executive officers are not invested with the judicial powers. But you are giving powers of a Magistrate to the executive officers of the Excise Department. The Superintendents and the Deputy Superintendents will have powers under this amendment not only to investigate but also for trial of offences. These Officers are both Prosecutors and Judges. Show me any Act in any State giving such powers to Administrative Officers. In other States, the Depury Commissioners and the Assistant Commissioners have got the powers to investigate but not to try the offences. But as per this amendment you have given the powers to the Superintendents and the Deputy Superintendents of the Excise Department which they did not exercise so far under the Act. This amounts to usurpation of the liberty of the citizen.

ಸ್ಯಾಮ್ಯಾ, ರಾಷ್ಟ್ರದ ಜನರ ಹಿತರಕ್ಷಣೆಯಾಗಬೇಕಾದರೆ ಎಕ್ಸೈಜು ಅಡ್ಮಿನಿಸ್ಟ್ರೇಷನ್ನಿನಲ್ಲಿ ಪೋಲೀಸು ಅಫೀಸರುಗಳಿಗೆ ಅಧಿಕಾರ ಇರಬೇಕು. ಈ ಮಸೂದೆಯಲ್ಲಿ ಅಬ್ಕಾರಿ ಅಧಿಕಾರಿಗಳಿಗೆ ಅಧಿಕಾರ ಕೊಡಲಾಗಿದೆ. ಮಂಗನಿಗೆ ಮದ್ಯಕುಡಿಸಿದಂತೆ ಇದರಿಂದ ಪರಿಣಾಮ ಆಗುವುದು, ಆದರೆ ಜೊತೆಗೆ ಚೇಳು ಕಡಿಸಿದರೆ ಯಾವ ರೀತಿ ಆಗುವುದೋ ಅದೇ ರೀತಿ ಈ ಮಸೂದೆಯಲ್ಲಿ ನಮೂದಿಸಿರುವಂತೆ ಎಕ್ಸೈಜ್ ಆಫೀಸರಿಗೆ ಅಧಿಕಾರ ಕೊಟ್ಟರೆ ಪ್ರಜೆಗಳಿಗೆ ತೊಂದರೆ ಮಾಡುವುದಕ್ಕೆ ಅವರಿಗೆ ಅವಕಾಶವಾಗುವುದು. ಇದರಿಂದ ಬಡ ಹಳ್ಳಿಗರಿಗೆ ತೊಂದರೆಯಾಗುವುದು. ಈಗಾಗಲೇ ನನ್ನ ಕ್ಷೇತ್ರದಲ್ಲಿ ಜನಸಾಮಾನ್ಯರಿಗೆ ಎಕ್ಸೈಜ್ ಆಫೀಸರಿಂದ ಹಾಗೂ ಕಂಟ್ರಾಕ್ಟರಿಂದ ಅನ್ಯಾಯವಾಗುತ್ತಿದೆ. ಇದರ ಸಂಬಂಧದಲ್ಲಿ ನನ್ನ ಕ್ಷೇತ್ರದಲ್ಲಿ ಸಾವಿರಾರು ಜನರು ರುಜುಹಾಕಿ, ಅರ್ಜಿ ಕೊಟ್ಟು ಇನ್

ವೆಸ್ಟಿಗೇಷನ್ ಕೂಡ ಮಾಡಬೇಕೆಂದು ಹೇಳಿದ್ದಾರೆ, ಅದುದರಿಂದ ಧೈರ್ಯವಾಗಿ ಹೇಳುತ್ತೇನೆ. ಡಿ.ಸಿ.ಗೆ. ಅರ್ಜಿ ಕೊಟ್ಟಿದ್ದಾರೆ. ಇಂದು ಎಕ್ಸೈಜ್ ಆಫೀಸರುಗಳ ರಾಜ್ಯವಾಗಿದೆ. ಹೆಂಗಸರನ್ನು ಮಧ್ಯರಾತ್ರಿಯಲ್ಲಿ ಹಿಡಿದು ಎಳೆಯುತ್ತಿದ್ದಾರೆ. You have proposed to take away the powers of the Revenue and Police Officers to arrest without warrant. What is your intention in removing of the powers of the Police Department and of the Revenue authorities ?

ನೀರ್ಮಾರ್ಗದಲ್ಲಿ ಎಕ್ಸೈಜ್ ಆಫೀಸರು ಮತ್ತು ಕಂಟ್ರಾಕ್ಟರರ ಗ್ಯಾಂಗು ರಾತ್ರಿ ಮನೆಗೆ ನುಗ್ಗಿ ಹೆಂಗಸರನ್ನು ಹಲವು ಕಡೆ ಹೆದರಿಸಿದ್ದಾರೆ. ಈ ವಿಷಯದಲ್ಲಿ ಮಾನ್ಯ ಅರ್ಥ ಸಚಿವರಿಗೆ ಬರೆದು ತಿಳಿಸಲಾಗಿದೆ. ಸಬ್ ಕಂಟ್ರಾಕ್ಟರು, ಸಬ್-ಇನ್‌ಸ್ಪೆಕ್ಟರು ಮತ್ತು ಅವರ ರೌಡಿ ಗ್ಯಾಂಗ್ ಮುಂತಾದವರೆಲ್ಲಾ ಕೂಡಿದು ಬಂದು ನೀರ್ಮಾರ್ಗದಲ್ಲಿ ಗಲಾಟೆಮಾಡಿದ್ದಾರೆ. ಕೀಗಿರುವಾಗ ಅವರಿಗೆ ಏಕೆ ಇನ್ನು ಹೆಚ್ಚಿನ ಅಧಿಕಾರ ಕೊಡುವುದು ? ನನ್ನ ಕ್ಷೇತ್ರದ ಹಲವು ಜನರು ಬಂದು ತಮ್ಮ ತೊಂದರೆಯನ್ನು ಹೇಳಿಕೊಂಡಾಗ ನಾನು ಅವರ ಊರಿಗೆ ಬರುತ್ತೇನೆಂದಾಗ ಅವರು ಸಂತೋಷ ಪಟ್ಟರು. ಜನರನ್ನು ಹೊಡೆಯುವುದಕ್ಕೆ ಎಕ್ಸೈಜ್ ಆಧಿಕಾರಿಗಳಿಗೆ ಅಧಿಕಾರವಿಲ್ಲ. ಎಕ್ಸೈಜು ಆಫೀಸರುಗಳಿಗೆ ಇನ್ನೂ ಹೆಚ್ಚಿನ ಅಧಿಕಾರ ಕೊಟ್ಟರೆ ನಾಳೆ ಅವರು ಊರು ಇಡುಕ್ಕಿಲ್ಲ. ನಾನು ಮೀಟಿಂಗಿಗೆ ಬರುವುದಾಗಿ ಹೇಳಿದ್ದೆ. ಆದರೆ ನಾನು ಬ್ರಾಹ್ಮಣ. ಸಾಂಬಾರು ತಿನ್ನುವ ಬ್ರಾಹ್ಮನಿಗೆ ಎಕ್ಸೈಸು ಆಫೀಸರ ಹಾಗೂ ಕಂಟ್ರಾಕ್ಟರರ ವಿರೋಧ ಬಹಿರಂಗ ಸಭೆಯಲ್ಲಿ ಮಾತ ನಾಡುವ ಧೈರ್ಯ ಎಲ್ಲಿಂದ ಬಂದೀತು ಎಂದು ಜನರು ತಿಳಿದುಕೊಂಡಾರೆಂದು ಶ್ರೀ ರತನ್ ಕುಮಾರ್ ಕಟ್ಟೇಮಾರರು ಕೂಡ ಮೀಟಿಂಗಿಗೆ ಬಾರದಂತೆ ಕೇಳಿಕೊಳ್ಳಲಾಗಿತ್ತು. ಅವರೂ ಸಹ ಒಪ್ಪಿದ್ದರು. ಆದರೆ ಶ್ರೀ ರತನ್ ಕುಮಾರರನ್ನು ಮೀಟಿಂಗಿಗೆ ಬಾರದಂತೆ ಕಿಡ್‌ನ್ಯಾಪ್ ಮಾಡಲಾಯ್ತು, ಪರವಾಗಿಲ್ಲ.

ಒಬ್ಬ ಸದಸ್ಯರು.—ಶ್ರೀ ರತನ್ ಕುಮಾರರೂ ಸಾಂಬಾರ್ ತಿನ್ನುವವರೇ ?

ಶ್ರೀ ಪಿ. ಎ. ಐತಾಳ್.—ಹೌದು ಆದರೆ ಅವರಿಗೆ ಮೀಸೆ ಇದೆ, ಮೋಟಾರು ಸೈಕರ್ ಇದೆ, ಮೋಟಾರ್ ಸೈಕಲ್ ನೆದುರು ಎತ್ತಿನ ಕೊಂಬು ಇದೆ, ಅವರನ್ನು ನೋಡಿದರೆ ಜನರು ಹೆದರುವರು. ರತ್ನಕುಮಾರರನ್ನು ಪುತ್ತೂರಿಗೆ ಕಿಡ್‌ನ್ಯಾಪ್ ಮಾಡಿಕೊಂಡು ಹೋದರು. ನೀವೇನು ಕಳ್ಳಭಟ್ಟಿ ಇಳಿಸುವ ಸಂಘದ ಅಧ್ಯಕ್ಷರಾಗುವಿರೇ ? ನೀವು ಹೋದರೆ ತಲೆಬುರುಡೆ ಒಡೆದೀತು ಎಂದು ನನಗೆ ಹಲವು ಫೋನ್ ಬಂತು, ನಾನು ಬ್ರಾಹ್ಮಣನಾದರೂ ನನಗೆ ಗರ್ವ ಉಂಟು, ನಾನು ನೀರ್ಮಾರ್ಗದ ಮೀಟಿಂಗ್‌ಗೆ/ಹೋಗಿಯೇ ಹೋದೆ, ಹೋಗುವಾಗ ಪೋಲೀಸರಿಗೆ ತಿಳಿಸಲಲ್ಲ. The Excise officials and the Sub-contractor with a gang of rowdies are raiding the houses of the innocent men and women and they have even insulted the women. But no action has been taken by the Deputy Commissioner or other superior officers.

About 50 people armed with dangerous weapons came in several cars to the meeting place and they wanted to assault and murder me and others at the meeting. This is on record with the police rural station, Mangalore. You can enquire and call for a report from the said station. Fifty persons with swords and dangerous weapons wanted to beat myself and the innocent people who had assembled there to hear me. If there is no evidence relating to this incident I will resign.

Sri K. CHIDANANDA.—Who is the contractor for Mangalore Taluk ?

ಶ್ರೀ ಪಿ. ಎ. ಐತಾಳ್.—ಮಂಗಳೂರು ತಾಲ್ಲೂಕಿನ ಅರೆಕ ಕಂಟ್ರಾಕ್ಟರು ಯಾರೆಂಬುದು ಎಲ್ಲರಿಗೂ ಗೊತ್ತಿದೆ, ಹೆಸರು ಹೇಳುವುದಿಲ್ಲ, ಸಬ್ ಕಂಟ್ರಾಕ್ಟರರ ಹಯರ್ಡ್‌ಗೇಂಗ್ ಕೂಡಿದು ಏನು ಬೇಕಾದರೂ ಮಾಡುವರು. ವರದಿ ತರಿಸಿದರೆ ವಿಚಾರ ಗೊತ್ತಾಗುವುದು.

6-00 P.M.

Sri H. SIDDAVEERAPPA.—Now it is 6 P.M., let the hon. member continue his speech next day, Sir.

Mr. DEPUTY SPEAKER.—The hon. Member may continue his speech on Monday. Now we shall take up half-an-hour discussion.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ, ಆ ದಿವನ ಶ್ರೀಮಾನ್ ಗಂಗಾಧರ್‌ರವರು ತಂದಿರತಕ್ಕ ಪ್ರಶ್ನೆ ವಾಟರ್‌ರೇಟ್ ತುಮಕೂರು ದಿಸ್ಟ್ರಿಕ್ಟ್‌ನಲ್ಲ ಎಲ್ಲೆಲ್ಲ ಯಾವ ಯಾವ ತಾಲ್ಲೂಕನಲ್ಲ ಎಷ್ಟು ವಸೂರಾಗಿದೆ ಎಂದು ಕೇಳಿದ್ದಾರೆ. ಅದರಲ್ಲಿ ಕೆಲವು ತಾಲ್ಲೂಕುಗಳಲ್ಲಿ ಒಂದೂವರೆ ಎರಡು ಮೂರು ಲಕ್ಷ ರೂಪಾಯಿಗಳು ವಸೂಲಾಗಿದೆ. ಈಗ ಇರತಕ್ಕ ಪರಿಸ್ಥಿತಿಯಲ್ಲ ನಾನು ಕೆಲವು ಪ್ರಶ್ನೆಗಳನ್ನು ಕಳುಹಿಸಿದ್ದೆ. ನನಗೆ ಏನು ಇನ್‌ಫರ್ಮೇಷನ್‌ಬೇಕು ಎಂದು ಕೇಳಿದ್ದೆನೋ ಅದನ್ನು ಸರ್ಕಾರದವರು ನನಗೆ ಒದಗಿಸಲೇ ಇಲ್ಲ.

Sri H. V. KOUJALGI.—If they are necessary I am prepared to supply provided this subject is adjourned to Monday.

ಉಪಾಧ್ಯಕ್ಷರು.—ತಮಗೆ ಏನು ಇನ್‌ಫರ್ಮೇಷನ್ ಬೇಕೊ ಅದನ್ನು ತರಿಸಿಕೊಡುತ್ತೇನೆ ಎಂದು ಹೇಳುತ್ತಾರೆ. ಆದ್ದರಿಂದ ಇದನ್ನು ಮುಂಗಳವಾರ ಅಥವಾ ಬುಧವಾರ ತೆಗೆದುಕೊಳ್ಳೋಣ. The House will now adjourn to meet tomorrow at 8-30 A.M.

The House was adjourned Five Minutes past Six of the Clock and meet again at Thirty Minutes past Eight of the Clock on Saturday the 26th September 1970.

WD 15485—GPB—550—18-12-70